ಕರ್ನಾಟಕ ವಿಧಾನಸಭೆ

ಸೋಮವಾರ 26ನೇ ಡಿಸೆಂಬರ್ 1994 ರಂದು ಸದನವು ವಿಧಾನಸೌಧದಲ್ಲಿರುವವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 1-00 ಗಂಟೆಗೆ ಸಮಾವೇಶಗೊಂಡಿತು.

ಶ್ರೀ ಧರ್ಮಸಿಂಗ್ (ಪ್ರೋಟಂ ಅಧ್ಯಕ್ಷರು) ಅವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು.

(ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕಾರ)

ಅಧ್ಯಕ್ಷರು:- ತಾವೆಲ್ಲರೂ ಈ ಹತ್ತನೆಯ ವಿಧಾನಸಭೆಗೆ ಜನರ ಆಶೀರ್ವಾದವನ್ನು ಪಡೆದುಬಂದಿದ್ದೀರಿ. ತಮಗೆಲ್ಲರಿಗೂ ಕೂಡ ನಾನು ಆತ್ಮೀಯವಾಗಿ ಸ್ವಾಗತವನ್ನು ಕೋರುತ್ತೇನೆ. ಈಗಾಗಲೇ ಮಾನ್ಯ ರಾಜ್ಯಪಾಲರು ಕೂಡ ನೂತನವಾಗಿ ಆಯ್ಕೆ ಆಗಿರತಕ್ಕ ಸದಸ್ಯರಿಗೆ ಪ್ರಮಾಣವಚನವನ್ನು ಬೋಧನೆ ಮಾಡತಕ್ಕ ಜವಾಬ್ದಾರಿಯನ್ನು ವಹಿಸಿದ್ದಾರೆ. ನಾನು ಅವರಿಗೂ ಕೂಡ ಆಭಾರಿಯಾಗಿದ್ದೇನೆ. ಇಲ್ಲಿ ಹೊಸದಾಗಿ ಬಂದಿರತಕ್ಕ ಹಿರಿಯ ಎಲ್ಲಾ ಸದಸ್ಯರು ಕೂಡ ಇದ್ದೀರಿ. ಜನರ ಆಶೋತ್ತರ ಮತ್ತು ಸಮಸ್ಯೆಗಳು ಏನಿವೆ ಅವುಗಳನ್ನು ಈಡೇರಿಸತಕ್ಕ ರೀತಿಯಲ್ಲಿ ಪ್ರಾಮಾಣಿಕವಾಗಿ ತಾವು ಕೆಲಸಕಾರ್ಯಗಳನ್ನು ಮಾಡುತ್ತೀರಿ ಎನ್ನುವ ಭರವಸೆಯಿಂದ, ಈಗ ನಮ್ಮ ಕಾರ್ಯದರ್ಶಿಯವರ ಮೂಲಕ ಪ್ರಮಾಣವಚನ ಬೋಧನೆಯ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಪ್ರಮಾಣವಚನ ಬೋಧನೆ ಮಾಡತಕ್ಕ ವಿಧಿವಿಧಾನದ ಬಗ್ಗೆ ಈಗಾಗಲೇ ನಾವು ಬುಲೆಟಿನ್ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಿದ್ದೇವೆ. ಈಗ ಪ್ರಮಾಣವಚನದ ಕಾರ್ಯಕ್ರಮವನ್ನು ಪ್ರಾರಂಭಿಸಬೇಕೆಂದು ಕಾರ್ಯದರ್ಶಿಯವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀಯುತರುಗಳಾದ:

1.	ಹೆಚ್.ಡಿ. ದೇವೇಗೌಡ	ರಾಮನಗರ
2.	ರಮೇಶ್‌ಕುಮಾರ್	ಶ್ರೀನಿವಾಸಪುರ
3.	ಜೆ.ಹೆಚ್. ಪಟೇಲ್	ಚೆನ್ನಗಿರಿ
4.	ಆರ್.ಎಲ್. ಜಾಲಪ್ಪ	ದೊಡ್ಡಬಳ್ಳಾಪುರ
5.	ಡಿ. ಮಂಜುನಾಥ್	ಹಿರಿಯೂರು
6.	ಎಂ.ಪಿ. ಪ್ರಕಾಶ್	ಹಡಗಲಿ
7.	ಸಿದ್ದರಾಮಯ್ಯ	ಚಾಮುಂಡೇಶ್ವರಿ
8.	ಪಿ.ಜಿ.ಆರ್. ಸಿಂಧ್ಯ	ಕನಕಪುರ
9.	ವೈದ್ಯನಾಥ್ ಪಾಟೇಲ್	ಚಿಂಚೋಳಿ
10.	ಸಿ. ಭೈರೇಗೌಡ	ವೇಮಗಲ್
11.	ಹೆಚ್.ಜಿ. ಗೋವಿಂದೇಗೌಡ	ಶೃಂಗೇರಿ
12.	ಶಿವಾನಂದ ಹೆಚ್. ಕೌಜಲಗಿ	ಬೈಲಹೊಂಗಲ
13.	ರಮೇಶ್ ಸಿ. ಜಿಗಜಿಣಗಿ	ಬಳ್ಳೊಳ್ಳಿ
14	ತಿಪ್ಪೇಸ್ವಾಮಿ	ಮೊಳಕಾಲ್ಮೂರು
15.	ಕೆ.ಎಸ್. ಬೀಳಗಿ	ಬ್ಯಾಡಗಿ
16.	ಹೆಚ್.ಸಿ. ಮಹಾದೇವಪ್ಪ	ಟಿ.ನರಸೀಪುರ